# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **383**

ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸಬೇಕಾದ ದಿನಾಂಕ : 10-12-2025

| | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಹೆಚ್ಚುತ್ತಿರುವ ವಾಹನ ನೋಂದಾವಣೆಯ ಒತ್ತಡವನ್ನು ಕಡಿಮೆ ಮಾಡಲು ಪ್ರಸ್ತುತ ಇನ್ನೂ ಎಷ್ಟು ಸಾರಿಗೆ ಪ್ರಾಧಿಕಾರಗಳನ್ನು ರಚಿಸಲು ಸರಕಾರ ಉದ್ದೇಶಿಸಿದೆ; ಅವುಗಳನ್ನು ಯಾವಾಗ ರಚಿಸಲಾಗುವುದು: | ರಾಜ್ಯದಲ್ಲಿ ಹೆಚ್ಚುತ್ತಿರುವ ವಾಹನ ನೋಂದಾವಣೆಯ ಒತ್ತಡವನ್ನು ಕಡಿಮೆ ಮಾಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>ದಿನಾಂಕ: 01-11-2021 ರಿಂದ ಸಾರಿಗೆ ಇಲಾಖೆಯಲ್ಲಿನ 52 ಸೇವೆಗಳನ್ನು ಆನ್‌ಲೈನ್ ಮುಖಾಂತರ ಒದಗಿಸಲಾಗುತ್ತಿದೆ. ಆ ಪೈಕಿ 24 ಸೇವೆಗಳು ಸಂಪರ್ಕರಹಿತ ಸೇವೆಗಳಾಗಿದ್ದು, ಸಾರ್ವಜನಿಕರು ಕಚೇರಿಗೆ ಆಗಮಿಸುವ ಅವಶ್ಯಕತೆ ಪ್ರಸ್ತುತ ಇರುವುದಿಲ್ಲ.<br><br>ಸಾರ್ವಜನಿಕರಿಗೆ ಅವರುಗಳ ವಾಹನ ಅನುಜ್ಞಾ ಪತ್ರ ಮತ್ತು ವಾಹನ ನೋಂದಣಿಯ ಸ್ಮಾರ್ಟ್ ಕಾರ್ಡ್‌ಗಳನ್ನು ಅವರ ಮನೆಯ ವಿಳಾಸಗಳಿಗೆ ಅಂಚೆ ಸೇವೆಯ ಮೂಲಕ ತಲುಪಿಸಲಾಗುತ್ತಿದೆ. ಇಲಾಖೆಯಲ್ಲಿ ವಾಹನ್-4, ಸಾರಥಿ-4 ಮತ್ತು ಇ-ಪೇಮೆಂಟ್ ಆಫ್ ಟ್ಯಾಕ್ಸ್ ನಂತಹ ಆನ್‌ಲೈನ್ ಸೇವೆಗಳನ್ನು ರಾಜ್ಯದ ಎಲ್ಲಾ ಕಛೇರಿಗಳಲ್ಲಿ ಜಾರಿಗೆ ತರಲಾಗಿದೆ ಹಾಗೂ ಸಾರ್ವಜನಿಕರು ಕರ್ನಾಟಕ-1 ಹಾಗೂ ಬೆಂಗಳೂರು-1 ಎಂಬ ಲ್ಯಾಪ್‌ಗಳಲ್ಲಿ ವಾಹನ ವಿವರ / ಮಾಹಿತಿಗಳನ್ನು ಪಡೆಯಬಹುದಾಗಿರುತ್ತದೆ. ಪ್ರಾದೇಶಿಕ ಸಾರಿಗೆ ಕಛೇರಿಗಳು ಇಲ್ಲದಿರುವ ತಾಲ್ಲೂಕುಗಳಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಪ್ರತಿ ಮಾಹೆಗಳಲ್ಲಿ ಸಾರಿಗೆ ಶಿಬಿರಗಳನ್ನು ನಡೆಸಲಾಗುತ್ತಿದೆ.<br><br>ಮುಂದುವರೆದು, ಸಾರಿಗೆ ಇಲಾಖೆಯಲ್ಲಿ ನೋಂದಣಿ ಪ್ರಮಾಣಪತ್ರ ಮತ್ತು ಚಾಲನಾ ಅನುಜ್ಞಾ ಪತ್ರ ವಿತರಿಸಲು ಕೇಂದ್ರೀಕೃತ ಸ್ಮಾರ್ಟ್ ಕಾರ್ಡ್ ಮುದ್ರಣ ಸೌಲಭ್ಯವನ್ನು ಇತ್ತೀಚೆಗೆ ಜಾರಿಗೊಳಿಸಲಾಗಿದೆ.<br><br>ಆದುದರಿಂದ, ಈ ಮೇಲ್ಕಂಡ ವಿವರಗಳ ಹಿನ್ನೆಲೆಯಲ್ಲಿ, ರಾಜ್ಯದಲ್ಲಿ ಹೊಸದಾಗಿ ಸಾರಿಗೆ ಕಛೇರಿಗಳನ್ನು ಪ್ರಾರಂಭಿಸುವ ಅವಶ್ಯಕತೆ ಇರುವುದಿಲ್ಲ. |
| ಆ. | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಯಾವುದಾದರೂ ಹೊಸ ಸಾರಿಗೆ ಪ್ರಾಧಿಕಾರಗಳನ್ನು ರಚಿಸುವ ಪ್ರಸ್ತಾವನೆ ಇದೆಯೇ; ದಕ್ಷಿಣದ ಜಿಲ್ಲೆಯ ಸುರತ್ಕಲ್ ಪ್ರದೇಶಕ್ಕೆ ಪ್ರತ್ಯೇಕ ಕೆಎ-62 ಸಾರಿಗೆ ಪ್ರಾಧಿಕಾರವನ್ನು ರಚಿಸುವ ಪ್ರಸ್ತಾವನೆ ಯಾವ ಹಂತದಲ್ಲಿದೆ; ಇದನ್ನು ಯಾವಾಗ ಪೂರ್ಣಗೊಳಿಸಲಾಗುವುದು: | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹೊಸ ಸಾರಿಗೆ ಪ್ರಾಧಿಕಾರಗಳನ್ನು ರಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.<br><br>ಸರ್ಕಾರದ ಆದೇಶ ಸಂಖ್ಯೆ: ಸಾರಿಇ 107 ಸಾಇಪ 2013, ದಿನಾಂಕ:28.08.2013 ರ ಆದೇಶದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯ ಸೂರತ್ಕಲ್ ನಲ್ಲಿ ಹೊಸದಾಗಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯನ್ನು ತೆರೆಯಲು ತಾತ್ವಿಕ ಅನುಮೋದನೆ ನೀಡಲಾಗಿದೆ. ಪ್ರಸ್ತುತ, ಸಾರಿಗೆ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬುವ ಪ್ರಕ್ರಿಯೆ ಜಾರಿಯಲ್ಲಿದ್ದು, ತದನಂತರ ಸೂರತ್ಕಲ್ ಕಛೇರಿಯನ್ನು ಪ್ರಾರಂಭಿಸಲು ಆದ್ಯತೆಯ ಮೇರೆಗೆ ಪರಿಶೀಲಿಸಿ ಕ್ರಮ ವಹಿಸಲಾಗುವುದು. |
| ಇ. | ರಾಜ್ಯದಲ್ಲಿ ಹೆಚ್ಚುತ್ತಿರುವ | ರಾಜ್ಯದಲ್ಲಿ ಹೆಚ್ಚುತ್ತಿರುವ ಸಾರಿಗೆ ವಾಹನಗಳ ಬಳಕೆಯ |

| | ಪ್ರಶ್ನೆ | ಉತ್ತರ |
|---|---|---|
| | ಸಾರಿಗೆ ವಾಹನಗಳ ಬಳಕೆಯ ಹಿನ್ನೆಲೆಯಲ್ಲಿ, ಖಾಸಗಿ ಮತ್ತು ಸರಕಾರಿ ಸಾರಿಗೆ ವ್ಯವಸ್ಥೆ, ಶಾಲಾ ವಾಹನ, ಖಾಸಗಿ ಸಾರಿಗೆ ಮತ್ತು ಸರಕು ಸಾಗಾಣಿಕೆ ವಾಹನ, ಇತ್ಯಾದಿ ವಾಹನಗಳ ಸುಸ್ಥಿತಿ, ಸುರಕ್ಷತೆ ಮತ್ತು ಸಮರ್ಪಕ ಸಂಚಾರ ವ್ಯವಸ್ಥೆ ಕುರಿತಂತೆ ಯಾವ ಯಾವ ಸುಧಾರಣಾ ಕ್ರಮಗಳನ್ನು ವಹಿಸಲಾಗುತ್ತಿದೆ: | ಹಿನ್ನಲೆಯಲ್ಲಿ, ಖಾಸಗಿ ಮತ್ತು ಸರ್ಕಾರಿ ಸಾರಿಗೆ ವ್ಯವಸ್ಥೆ, ಶಾಲಾ ವಾಹನ, ಖಾಸಗಿ ಸಾರಿಗೆ ಮತ್ತು ಸರಕು ಸಾಗಾಣಿಕೆ ವಾಹನ ಇತ್ಯಾದಿ ವಾಹನಗಳ ಸುಸ್ಥಿತಿ, ಸುರಕ್ಷತೆ ಮತ್ತು ಸಮರ್ಪಕ ಸಂಚಾರ ವ್ಯವಸ್ಥೆಗೆ ಸಂಬಂಧಿಸಿದಂತೆ ಸಾರಿಗೆ ಇಲಾಖೆಯಿಂದ ಕೈಗೊಂಡಿರುವ ಕ್ರಮಗಳ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ.<br>ಮುಂದುವರೆದು, ಸಾರಿಗೆ ಇಲಾಖೆಯ ಅಧೀನದ ರಸ್ತೆ ಸಾರಿಗೆ ನಿಗಮ / ಸಂಸ್ಥೆಗಳಿಂದ ಕೈಗೊಂಡಿರುವ ಕ್ರಮಗಳ ಮಾಹಿತಿ ಈ ಕೆಳಕಂಡಂತಿದೆ:<br><br>**KSRTC**<br>ಸಮರ್ಪಕ ಸಂಚಾರ ವ್ಯವಸ್ಥೆಗೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವ್ಯಾಪ್ತಿಯಲ್ಲಿ 17 ಜಿಲ್ಲೆಗಳು ಬರುತ್ತವೆ. ಸದರಿ ಕಾರ್ಯಾಚರಣೆ ವ್ಯಾಪ್ತಿಯಲ್ಲಿ ಒಟ್ಟು 8252 ಅನುಸೂಚಿಗಳಿಂದ 52317 ಟ್ರಿಪ್‌ಗಳ ಕಾರ್ಯಾಚರಣೆಯನ್ನು ಮಾಡಲಾಗುತ್ತಿದೆ. ನಿಗಮದ ವ್ಯಾಪ್ತಿಯಲ್ಲಿ ಒಟ್ಟು 21748 ಗ್ರಾಮಗಳು ಇದ್ದು, ಇದರಲ್ಲಿ 19971 ಗ್ರಾಮಗಳಿಗೆ ಸಾರಿಗೆ ಸೌಲಭ್ಯವನ್ನು ಒದಗಿಸಲಾಗಿರುತ್ತದೆ. ಸಾರಿಗೆ ಸೌಲಭ್ಯ ಒದಗಿಸದೇ ಇರುವ ಗ್ರಾಮಗಳ ಪೈಕಿ 239 ಗ್ರಾಮಗಳಿಗೆ ಭಾರಿ ವಾಹನ ಚಲಿಸುವ ರಸ್ತೆ ಇರುವುದಿಲ್ಲ. ಉಳಿದಂತೆ, ಬಹುತೇಕ ಗ್ರಾಮಗಳಿಗೆ ಖಾಸಗಿ ಪ್ರವರ್ತಕರು ಸಾರಿಗೆ ಸೌಲಭ್ಯವನ್ನು ಕಲ್ಪಿಸುತ್ತಿರುತ್ತಾರೆ. 1777 ಗ್ರಾಮಗಳಿಗೆ 2 ಕಿ.ಮೀ. ಸಮೀಪದೊಳಗಿನ ರಸ್ತೆಯವರೆಗೆ ಸಾರಿಗೆ ಸೌಲಭ್ಯವನ್ನು ಒದಗಿಸಲಾಗಿರುತ್ತದೆ.<br><br>ಮುಂದುವರೆದು, ಸಾರಿಗೆ ಸೌಲಭ್ಯವಿಲ್ಲದ ಗ್ರಾಮಗಳಿಗೆ ಬೇಡಿಕೆಗೆ ಅನುಗುಣವಾಗಿ ಸದರಿ ಗ್ರಾಮಗಳಿಗೆ ಹಂತ-ಹಂತವಾಗಿ ಮೂಲಭೂತ ಸೌಕರ್ಯಗಳನ್ನು ಕ್ರೂಢೀಕರಿಸಿಕೊಂಡು ಮಾರ್ಗ ಸಮೀಕ್ಷೆ ಕೈಗೊಂಡು ಪರಿಶೀಲಿಸಿ ಸಾರಿಗೆ ಸೌಲಭ್ಯವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಕ.ರಾ.ರ.ಸಾ.ನಿಗಮದಲ್ಲಿ ಸುಮಾರು 08 ರಿಂದ 09 ವರ್ಷ ಕ್ರಮಿಸಿದ ವಾಹನಗಳನ್ನು ಪರಿಶೀಲಿಸಿ ಅವಶ್ಯಕವಿದ್ದಲ್ಲಿ ವಾಹನದ ಸ್ಥಿತಿಗನುಗುಣವಾಗಿ ಕವಚ ಪುನ:ಶ್ಚೇತನ ಅಥವಾ ಹೆಚ್ಚುವರಿ ಕವಚ ದುರಸ್ತಿಯನ್ನು ಪ್ರಾದೇಶಿಕ ಕಾರ್ಯಾಗಾರ ಮತ್ತು ವಿಭಾಗೀಯ ಕಾರ್ಯಾಗಾರಗಳಲ್ಲಿ ನಿರ್ವಹಿಸಲಾಗುತ್ತಿದೆ.<br><br>ಮುಂದುವರೆದು ವಾಹನಗಳನ್ನು ಸುಸ್ಥಿತಿಯಲ್ಲಿರಿಸಲು ವಾಹನದ OLM ರವರ ಶಿಫಾರಸ್ಸಿನಂತೆ ದೈನಂದಿನ/ ವಾರಾಂತ್ಯ ಹಾಗೂ ಡಾಕಿಂಗ್ ನಂತಹ ಸೂಕ್ತ ನಿರ್ವಹಣೆಗಳನ್ನು ಸಕಾಲದಲ್ಲಿ ನಿರ್ವಹಿಸಲಾಗುತ್ತಿರುತ್ತದೆ.<br><br>ಅಂತೆಯೇ ಪ್ರತಿ ವರ್ಷ ನಿಗಮದ ವಾಹನಗಳನ್ನು ಅರ್ಹತಾ ಪತ್ರ ನವೀಕರಣಗೊಳಿಸಲು ಪ್ರಾದೇಶಿಕ ಸಾರಿಗೆ ಕಛೇರಿಗೆ ಒಳಪಡಿಸಿ ಸುಸ್ಥಿತಿಯಲ್ಲಿರುವ ಕುರಿತು ದೃಢೀಕರಣ ಪಡೆದುಕೊಂಡು ಕಾರ್ಯಾಚರಣೆಗೊಳಿಸಲಾಗುತ್ತಿರುತ್ತದೆ ಹಾಗೂ ಪ್ರಯಾಣಿಕರ ಸುರಕ್ಷತಾ ದೃಷ್ಟಿಯಿಂದ ಪ್ರತಿಷ್ಠಿತ ಮತ್ತು ಸಾಮಾನ್ಯ ವಾಹನಗಳಲ್ಲಿ FDSS/FDAS ನಂತಹ ಅಗ್ನಿನಂದಕ ಉಪಕರಣಗಳನ್ನು ಅಳವಡಿಸಲಾಗಿರುತ್ತದೆ. |

| | ಪ್ರಶ್ನೆ | ಉತ್ತರ |
|---|---|---|
| | | ಇದಲ್ಲದೇ, ಮಾರ್ಗ ಕಾರ್ಯಾಚರಣೆಗೆ ಒದಗಿಸುವ ಎಲ್ಲಾ ವಾಹನಗಳಲ್ಲಿ ಸುಸ್ಥಿತಿಯಲ್ಲಿರುವ ಅಗ್ನಿನಂದಕ ಉಪಕರಣಗಳು, ತುರ್ತು ನಿರ್ಗಮನ ಬಾಗಿಲು, ಪ್ರಥಮ ಚಿಕಿತ್ಸಾ ಪೆಟ್ಟಿಗೆ, ಟಾಪ್ ವೆಂಟಿಲೇಟರ್ ಮತ್ತು ಹ್ಯಾಮರ್ ಇರುವಿಕೆಯನ್ನು ಕಾಲಕಾಲಕ್ಕೆ ಪರಿಶೀಲಿಸಲಾಗುತ್ತಿರುತ್ತದೆ.<br><br>**BMTC**<br>ಬೆಂ.ಮ.ಸಾ.ಸಂಸ್ಥೆಯಲ್ಲಿ ಎಲ್ಲಾ ಮಾದರಿಯ ಬಸ್ಸುಗಳನ್ನು ದೈನಂದಿನ ಮತ್ತು ಹತ್ತು ದಿನಗಳ ನಿರ್ವಹಣೆಯಂತಹ ಮುನ್ನೆಚ್ಚರಿಕಾ ನಿರ್ವಹಣೆ ಹಾಗೂ ವಿವಿಧ ಹಂತದ ನಿಯತಕಾಲಿಕ ನಿರ್ವಹಣೆಗಳಿಗೆ ಒಳಪಡಿಸಲಾಗುತ್ತಿದ್ದು, ದೋಷಗಳು ಕಂಡುಬಂದಲ್ಲಿ ಅಥವಾ ವರದಿಯಾದಲ್ಲಿ ತಕ್ಷಣವೇ ದುರಸ್ಥಿಗೊಳಪಡಿಸಿ, ನಂತರವಷ್ಟೇ ಕಾರ್ಯಾಚರಣೆ ಮಾಡಲಾಗುತ್ತಿರುತ್ತದೆ. ಅದಲ್ಲದೇ, ರಹದಾರಿ ನವೀಕರಣದ ಸಂದರ್ಭದಲ್ಲಿ ಬಸ್ಸುಗಳ ಕವಚ ದೋಷಗಳನ್ನು ಪರಿಶೀಲಿಸಿ ಪುನಃಶ್ಚೇತನಗೊಳಿಸಲಾಗುತ್ತಿರುತ್ತದೆ ಹಾಗೂ ಸಂಸ್ಥೆಯಲ್ಲಿ ಭೌತಿಕ ಮತ್ತು ತಾಂತ್ರಿಕವಾಗಿ ಸುಸ್ಥಿತಿಯಲ್ಲಿರುವ ಹಾಗೂ ಆಚರಣೆಗೆ ಯೋಗ್ಯವಾಗಿರುವ ಬಸ್ಸುಗಳನ್ನು ಮಾತ್ರ ಆಚರಿಸಲಾಗುತ್ತಿದೆ.<br><br>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಪ್ರಯಾಣಿಕರ ಸುರಕ್ಷತೆಯ ಹಿತದೃಷ್ಠಿಯಿಂದ ವಾಹನಗಳಲ್ಲಿ ಪ್ರಥಮ ಚಿಕಿತ್ಸೆ ಪೆಟ್ಟಿಗೆ, ಸಿ.ಸಿ. ಕ್ಯಾಮರಾ, ಪ್ಯಾನಿಕ್ ಬಟನ್, ತುರ್ತು ನಿರ್ಗಮನ ಬಾಗಿಲು, ಬೆಂಕಿ ನಂದಕ ಹಾಗೂ ಜಿ.ಪಿ.ಎಸ್ ಗಳನ್ನು ಅಳವಡಿಸಲಾಗಿದೆ.<br><br>ಮುಂದುವರೆದು, ಸಂಸ್ಥೆಯ, ಬೆಂಗಳೂರು ನಗರ ಹಾಗೂ ಹೊರ ವಲಯದ ಸಾರ್ವಜನಿಕ ಪ್ರಯಾಣಿಕರಿಗೆ ಉತ್ತಮ, ಸುಲಭ, ಸುರಕ್ಷಿತ ಸಾರಿಗೆ ಸೇವೆಯನ್ನು ಒದಗಿಸುವ ನಿಟ್ಟಿನಲ್ಲಿ ಪ್ರತಿದಿನ 6,274 ಅನುಸೂಚಿಗಳನ್ನು 65,934 ಸುತ್ತುವಳಿಗಳೊಂದಿಗೆ 13.0 ಲಕ್ಷ ಕಿ.ಮೀ.ಗಳಲ್ಲಿ ಬೆಂಗಳೂರು ನಗರ ಹಾಗೂ ಹೊರವಲಯದ ಪ್ರಯಾಣಿಕರ ದಟ್ಟಣೆಗನುಗುಣವಾಗಿ ಸಮರ್ಪಕ ಸಂಚಾರ ವ್ಯವಸ್ಥೆಯನ್ನು ಒದಗಿಸುತ್ತಿದೆ. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಕಾರ್ಯಾಚರಣೆ ವ್ಯಾಪ್ತಿಯನ್ನು 25 ಕಿ.ಮೀ. ನಿಂದ 40 ಕಿ.ಮೀ. ರವರೆಗೆ ಹೆಚ್ಚಿಸಲು ಕರಡು ಅಧಿಸೂಚನೆ ಹೊರಡಿಸಲಾಗಿದ್ದು, ಸದ್ಯದಲ್ಲಿಯೇ ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಕ್ರಮವಹಿಸಲಾಗುತ್ತಿದೆ.<br><br>**NWKRTC**<br>ಸಂಸ್ಥೆಯಲ್ಲಿ ಕಾರ್ಯಾಚರಣೆಯಲ್ಲಿರುವ ಬಸ್ಸುಗಳಲ್ಲಿ CMVR ರನ್ವಯ ಸುರಕ್ಷತಾ ವ್ಯವಸ್ಥೆಗಳನ್ನು ಅಳವಡಿಸಲಾಗಿರುತ್ತದೆ. ಅದರಂತೆ ಸಂಸ್ಥೆಯಲ್ಲಿ ಖರೀದಿಸಲಾಗುತ್ತಿರುವ ಹೊಸ ಬಸ್ಸುಗಳಲ್ಲಿ Vehicles location and tracking system with panic button ಸುರಕ್ಷತಾ ಸಾಧನಗಳನ್ನು ಅಳವಡಿಸಲಾಗುತ್ತಿದೆ. ಅದರಂತೆ ಈಗಾಗಲೇ 1097 ಬಸ್ಸುಗಳಲ್ಲಿ ಅಳವಡಿಸಲಾಗಿರುತ್ತದೆ. ಅಲ್ಲದೇ 867 ಹೊಸ ಬಸ್ಸುಗಳಲ್ಲಿ cc camera, EVSC ಹಾಗೂ Fire detection Alarm systemಗಳನ್ನು |

| | ಪ್ರಶ್ನೆ | ಉತ್ತರ |
|---|---|---|
| | | ಅಳವಡಿಸಲಾಗಿರುತ್ತದೆ. ಕಾರ್ಯಾಚರಣೆಯಲ್ಲಿರುವ ಹಳೆಯ ಬಸ್ಸುಗಳನ್ನು ಮೂಲ ಉತ್ಪಾದಕರ ಶಿಫಾರಸ್ಸಿನಂತೆ ಕಾಲಕಾಲಿಕ ದುರಸ್ತಿ/ನಿರ್ವಹಣೆಗಳನ್ನು ಕೈಗೊಂಡು ಮತ್ತು ಪ್ರಾದೇಶಿಕ ಸಾರಿಗೆ ಕಛೇರಿ, ಸಾರಿಗೆ ಇಲಾಖೆರವರಿಂದ ಅರ್ಹತಾ ನವೀಕರಣ ಪತ್ರ ಪಡೆದು ಸುಸ್ಥಿತಿಯಲ್ಲಿರುವ ರಸ್ತೆ ಯೋಗ್ಯ ಬಸ್ಸುಗಳನ್ನು ಮಾತ್ರ ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ಅಕ್ಟೋಬರ್-2025ರ ಅಂತ್ಯಕ್ಕೆ 4985 ಅನುಸೂಚಿಗಳಿಂದ 38720 ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದ್ದು, ಸಾರ್ವಜನಿಕರಿಗೆ ಸಾರಿಗೆ ಸೌಲಭ್ಯ ಒದಗಿಸಲಾಗುತ್ತಿದೆ.<br><br>**KKRTC**<br>ಸಾರ್ವಜನಿಕ ಪ್ರಯಾಣಿಕರು ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸಮರ್ಪಕ/ಸುರಕ್ಷಿತ ಸಾರಿಗೆ ಸೌಲಭ್ಯವನ್ನು ಕಲ್ಪಿಸುವ ನಿಟ್ಟಿನಲ್ಲಿ ಕ.ಕ.ರ.ಸಾ.ನಿಗಮದ ವತಿಯಿಂದ ಈ ಕೆಳಕಂಡಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>1. ಎಲ್ಲಾ ಅನುಸೂಚಿಗಳನ್ನು ನಮೂನೆ-4 ರಂತೆ ಸಮಯಕ್ಕೆ ಸರಿಯಾಗಿ ಕಾರ್ಯಾಚರಣೆ ಮಾಡಲು ಸೂಚಿಸಲಾಗಿದೆ.<br>2. ಶಾಲಾ/ಕಾಲೇಜುಗಳ ಸಮಯಕ್ಕೆ ಸರಿಯಾಗಿ ಸಾರಿಗೆಗಳನ್ನು ಕಾರ್ಯಾಚರಿಸಲು ಸೂಚಿಸಲಾಗಿದೆ.<br>3. ಹೆಚ್ಚಿನ ಜನಸಂದಣಿ ಮಾರ್ಗಗಳನ್ನು ಗುರುತಿಸಿ, ಅವಶ್ಯಕತೆಗನುಗುಣವಾಗಿ ಹೆಚ್ಚುವರಿ ಸುತ್ತುವಳಿ ಕಲ್ಪಿಸಲು ಕ್ರಮವಹಿಸಲು ತಿಳಿಸಲಾಗಿದೆ.<br>4. ಚಾಲನಾ ಸಮಯದಲ್ಲಿ ಚಾಲಕರು ಮೊಬೈಲ್‌ನಲ್ಲಿ ಮಾತನಾಡದಂತೆ ಸೂಚಿಸುವುದು ಹಾಗೂ ಸಂಚಾರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಲಾಗಿದೆ.<br>5. ಬೈಪಾಸ್ ಮುಖಾಂತರ ಸಾರಿಗೆಗಳನ್ನು ಕಾರ್ಯಾಚರಣೆ ಮಾಡದೇ ನಿಗದಿತ ಬಸ್ ನಿಲ್ದಾಣ/ಪಟ್ಟಣದ ಮುಖೇನ ಕಾರ್ಯಾಚರಿಸಲು ಚಾಲನಾ ಸಿಬ್ಬಂದಿಗಳಿಗೆ ಸೂಚಿಸಲಾಗಿದೆ.<br>6. ಸಾರ್ವಜನಿಕ ಪ್ರಯಾಣಿಕರು ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳು ನಿಗದಿತ ನಿಲುಗಡೆ ಸ್ಥಳಗಳಲ್ಲಿ ಕೈ ತೋರಿದಲ್ಲಿ ನಿಲುಗಡೆ ಮಾಡಿ ಹತ್ತಿಸಿಕೊಳ್ಳಲು ಚಾಲನಾ ಸಿಬ್ಬಂದಿಗಳಿಗೆ ಸೂಚಿಸಲಾಗಿದೆ.<br>7. ಸಾರ್ವಜನಿಕ ಪ್ರಯಾಣಿಕರು ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳೊಂದಿಗೆ ಅದರಲ್ಲೂ ವಿಶೇಷವಾಗಿ ಮಹಿಳೆಯರೊಂದಿಗೆ ಸೌಜನ್ಯಯುತವಾಗಿ ವರ್ತಿಸುವಂತೆ ತಿಳಿಸುವುದು.<br>8. ನಿಗಮದ ವಾಹನಗಳಲ್ಲಿ ಮೀಸಲಿರಿಸಿರುವ ಆಸನಗಳಲ್ಲಿ ಸಂಬಂಧಪಟ್ಟವರು ಕುಳಿತು ಪ್ರಯಾಣಿಸಲು ಅನುವು ಮಾಡಿಕೊಡಲು ತಿಳಿಸುವುದು.<br>9. ಪ್ರತಿ ತಿಂಗಳು ಮೊದಲನೇಯ ಸೋಮವಾರದಂದು ಎಲ್ಲಾ ವಿಭಾಗಗಳಲ್ಲಿ ಫೋನ್-ಇನ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಸದರಿ ಕಾರ್ಯಕ್ರಮದಲ್ಲಿ ಸ್ವೀಕೃತವಾಗುವ ಮನವಿ/ ಅಹವಾಲುಗಳನ್ನು ಪಡೆದುಕೊಂಡು ಕ್ರಮ ಜರುಗಿಸಲಾಗುತ್ತಿದೆ. |

| | ಪ್ರಶ್ನೆ | ಉತ್ತರ |
|---|---|---|
| | | 10. ಗಣಕೀಕೃತ ಅಧಾರಿತ ಚಾಲನಾ ವೃತ್ತಿ ಪರೀಕ್ಷೆಯ ಮುಖಾಂತರ ಪಾರದರ್ಶಕವಾಗಿ ಚಾಲನಾ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ.<br>11. ಅಪಘಾತದಿಂದಾಗುವ ದುಷ್ಪರಿಣಾಮ ಹಾಗೂ ಸುರಕ್ಷತಾ ಕ್ರಮಗಳ ಬಗ್ಗೆ ಜಾಗೃತಿಯನ್ನು ಮೂಡಿಸುವ ಸಲುವಾಗಿ **"ಸಂಚಾರ ಸಭಾ ವಾಹನ"** ವನ್ನು ಎಲ್ಲಾ ಘಟಕಗಳಿಗೆ ನಿಯೋಜಿಸಿ ಜಾಗೃತಿ ಕಾರ್ಯಕ್ರಮ/ತರಬೇತಿ ಹಮ್ಮಿಕೊಳ್ಳಲಾಗುತ್ತಿದೆ.<br>12. ತಾಂತ್ರಿಕವಾಗಿ ಉನ್ನತ ದರ್ಜೆಯ ಬಸ್ಸುಗಳನ್ನು ನಿಗಮದ ವಾಹನ ಬಲಕ್ಕೆ ಸೇರ್ಪಡೆಗೊಳಿಸಲಾಗುತ್ತಿದೆ. ಬಿ.ಎಸ್-6 ವಾಹನಕ್ಕೆ ಮುಂಭಾಗ ಮತ್ತು ಹಿಂಬದಿ ಕ್ಯಾಮರಾ ಅಳವಡಿಸಲಾಗಿದೆ.<br>13. ವಾರಾಂತ್ಯ/ಹಬ್ಬ-ಹರಿದಿನ/ವಿಶೇಷ ದಿನ/ಜಾತ್ರೆ ಗಳಂದು ಜನದಟ್ಟಣೆಗನುಗುಣವಾಗಿ ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.<br>14. ಶಕ್ತಿ ಯೋಜನೆ ಜಾರಿಯಿಂದ ನಿಗಮದ ಸಾರಿಗೆಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರ ಸಂಖ್ಯೆಯಲ್ಲಿ ಹೆಚ್ಚಳವಾಗಿದ್ದರಿಂದ ಅನುಸೂಚಿ/ಸರತಿಗಳನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದ್ದು, 4715 ಅನುಸೂಚಿಗಳಿಂದ 27974 ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದ್ದು, ಸಾರ್ವಜನಿಕರಿಗೆ ಸಾರಿಗೆ ಸೌಲಭ್ಯ ಒದಗಿಸಲಾಗುತ್ತಿದೆ. |
| ಈ. | ರಾಜ್ಯದಲ್ಲಿ ಹೆಚ್ಚುತ್ತಿರುವ ರಸ್ತೆ ಅಪಘಾತಗಳನ್ನು ಶೂನ್ಯ ಮಟ್ಟಕ್ಕಿಳಿಸಲು ಮತ್ತು ಸಾರಿಗೆ ಸುರಕ್ಷತಾ ಕ್ರಮಗಳ ಪಾಲನೆಯ ನಿರ್ಲಕ್ಷದ ವಿರುದ್ಧ ಶೂನ್ಯ ಸಹಿಷ್ಣುತೆ (Zero-Tolerance Policy towards to rules violation) ಯನ್ನು ಸಾಧಿಸಲು ಯಾವ ಸರ್ಕಾರ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದೆ? | ರಾಜ್ಯದಲ್ಲಿ ಹೆಚ್ಚುತ್ತಿರುವ ರಸ್ತೆ ಅಪಘಾತಗಳನ್ನು ಶೂನ್ಯ ಮಟ್ಟಕ್ಕಿಳಿಸಲು ಮತ್ತು ಸಾರಿಗೆ ಸುರಕ್ಷತಾ ಕ್ರಮಗಳ ಪಾಲನೆಯ ನಿರ್ಲಕ್ಷದ ವಿರುದ್ಧ ಶೂನ್ಯ ಸಹಿಷ್ಣುತೆ (Zero- Tolerance Policy towards to rules violation) ಯನ್ನು ಸಾಧಿಸಲು ಸಾರಿಗೆ ಇಲಾಖೆಯಿಂದ ಕೈಗೊಂಡಿರುವ ಕ್ರಮಗಳ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ.<br><br>ಮುಂದುವರೆದು, ಸಾರಿಗೆ ಇಲಾಖೆಯ ಅಧೀನದ ಸಾರಿಗೆ/ನಿಗಮ ಸಂಸ್ಥೆಗಳಿಂದ ಕೈಗೊಳ್ಳಲಾದ ಕ್ರಮದ ಮಾಹಿತಿಯನ್ನು **ಅನುಬಂಧ-3** ರಲ್ಲಿ ಒದಗಿಸಲಾಗಿದೆ. |

**ಟಿಡಿ 77 ಟಿಡಿಕ್ಯೂ 2025**

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು

ಅನುಬಂಧ-1

**ರಾಜ್ಯದಲ್ಲಿ ಹೆಚ್ಚುತ್ತಿರುವ ಸಾರಿಗೆ ವಾಹನಗಳ ಬಳಕೆಯ ಹಿನ್ನಲೆಯಲ್ಲಿ, ಖಾಸಗಿ ಮತ್ತು ಸರ್ಕಾರಿ ಸಾರಿಗೆ ವ್ಯವಸ್ಥೆ, ಶಾಲಾ ವಾಹನ, ಖಾಸಗಿ ಸಾರಿಗೆ ಮತ್ತು ಸರಕು ಸಾಗಾಣಿಕೆ ವಾಹನ ಇತ್ಯಾದಿ ವಾಹನಗಳ ಸುಸ್ಥಿತಿ, ಸುರಕ್ಷತೆ ಮತ್ತು ಸಮರ್ಪಕ ಸಂಚಾರ ವ್ಯವಸ್ಥೆಗೆ ಸಂಬಂಧಿಸಿದಂತೆ ಸಾರಿಗೆ ಇಲಾಖೆಯಿಂದ ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿವೆ:**

ರಾಜ್ಯದಲ್ಲಿ ಸಂಚರಿಸುವ ಸಾರಿಗೆ ವಾಹನಗಳಿಗೆ, ಖಾಸಗಿ ಸಾರಿಗೆ ವಾಹನಗಳಿಗೆ, ಶಾಲಾ ವಾಹನಗಳಿಗೆ ಮತ್ತು ಸರಕು ಸಾಗಣೆ ವಾಹನಗಳಿಗೆ ಕಡ್ಡಾಯವಾಗಿ ಜಿ.ಪಿ.ಎಸ್ ಪ್ಯಾನಿಕ್ ಬಟನ್ (VLTD) ಗಳ ಅಳವಡಿಕೆ, ರಿಫ್ಲೆಕ್ಟಿವ್ ಟೇಪ್ ಅಳವಡಿಕೆ, ಪಬ್ಲಿಕ್ ಅಡ್ರೆಸಿಂಗ್ ಸಿಸ್ಟಮ್, ಅಗ್ನಿಶಾಮಕ ಸಾಧನ, ವೇಗ ನಿಯಂತ್ರಣ ಸಾಧನ (Speed Governor)ಗಳ ಮತ್ತು ಅತಿ ಸುರಕ್ಷತಾ ನೋಂದಣಿ ಫಲಕ (HSRP) ಗಳ ಅಳವಡಿಕೆಯನ್ನು ಕಡ್ಡಾಯಗೊಳಿಸಲಾಗಿರುತ್ತದೆ.

ಸಾರಿಗೆ ವಾಹನಗಳ ಸುಸ್ಥಿತಿಯನ್ನು ವೈಜ್ಞಾನಿಕವಾಗಿ ಆಧುನಿಕ ಯಂತ್ರೋಪಕರಣ ಮೂಲಕ ಪರೀಕ್ಷಿಸುವ ಸಂಬಂಧ ಜಿಲ್ಲೆಗೊಂದರಂತೆ ರಾಜ್ಯಾದ್ಯಂತ 32 ಸ್ವಯಂಚಾಲಿತ ಪರೀಕ್ಷಾ ಕೇಂದ್ರಗಳನ್ನು (ATS) ಸ್ಥಾಪಿಸಲು ಉದ್ದೇಶಿಸಿದ್ದು, ಈ ಸಂಬಂಧ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. ಪ್ರಸ್ತುತ ರಾಜ್ಯದಲ್ಲಿ 03 ಪರೀಕ್ಷಾ ಕೇಂದ್ರಗಳು ಕಾರ್ಯಾಚರಿಸುತ್ತಿವೆ.
ಚಾಲಕರಿಗೆ ಉತ್ತಮ ತರಬೇತಿಯನ್ನು ನೀಡಿ, ಚಾಲನಾ ಕೌಶಲ್ಯವನ್ನು ಅಭಿವೃದ್ಧಿಪಡಿಸಿ ಸಮಾಜಕ್ಕೆ ಗುಣಮಟ್ಟದ ಚಾಲಕರನ್ನು ನೀಡುವ ದೃಷ್ಟಿಯಿಂದ ರಾಜ್ಯದಲ್ಲಿ ಸರ್ಕಾರದ ವತಿಯಿಂದ ಭಾರಿ ವಾಹನ ಚಾಲಕರ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ.

ಇದಲ್ಲದೆ, ಸಾರ್ವಜನಿಕ ಸುರಕ್ಷತೆ ಮತ್ತು ಸಂಭವಿಸಬಹುದಾದ ಅಪಘಾತಗಳನ್ನು ತಪ್ಪಿಸಲು ಸಮರ್ಪಕ ಸಂಚಾರ ವ್ಯವಸ್ಥೆ ಸುಗಮಗೊಳಿಸಲು 2024-25 ನೇ ಸಾಲಿನಲ್ಲಿ ಸಾರಿಗೆ ಇಲಾಖಾ ವತಿಯಿಂದ ರಸ್ತೆ ಸುರಕ್ಷತೆ ಯೋಜನೆಯಡಿ KSRTC ನಿಗಮದ 300 ವಾಹನಗಳಲ್ಲಿ Driver Drowsiness System & Collision Warning System ಸಾಧನಗಳನ್ನು ಅಳವಡಿಸಲಾಗಿರುತ್ತದೆ ಹಾಗೂ ಕೇಂದ್ರ ಸರ್ಕಾರದ ರಸ್ತೆ ಮತ್ತು ಹೆದ್ದಾರಿಗಳ ಸಚಿವಾಲಯದ ನಿರ್ದೇಶನದಂತೆ ಮೋಟಾರು ವಾಹನ ಕಾಯ್ದೆ 1988ರ ಕಲಂ 136A ಮತ್ತು ಕೇಂದ್ರ ಮೋಟಾರು ವಾಹನ ನಿಯಮಗಳು 1989ರ ನಿಯಮ 167Aನ್ನು ಜಾರಿಗೊಳಿಸುವ ದಿಸೆಯಲ್ಲಿ, Electronic Monitoring and Enforcement of Road Safety ರಡಿ Black Spot ಇರುವ ರಾಷ್ಟ್ರೀಯ / ರಾಜ್ಯ ಹೆದ್ದಾರಿಗಳಲ್ಲಿ ಮತ್ತು ಹೆಚ್ಚಿನ ಸಂಚಾರ ಸಾಂದ್ರತೆಯ ಜಂಕ್ಷನ್‌ಗಳಲ್ಲಿ (ಒಟ್ಟು 80 ಸ್ಥಳಗಳಲ್ಲಿ) AI ಆಧಾರಿತ ಕ್ಯಾಮರಾಗಳನ್ನು ಅಳವಡಿಸಲಾಗುತ್ತಿದೆ. ಸಾರಿಗೆ ಇಲಾಖೆಯು ಈಗಾಗಲೇ ರಾಜ್ಯದ 07 ಟೋಲ್ ಪ್ಲಾಜಾಗಳಲ್ಲಿ AI ಆಧಾರಿತ ಕ್ಯಾಮಾರಾಗಳನ್ನು SMART ENFORCEMENT ಯೋಜನೆಯಡಿ ಅಳವಡಿಸಿ ವಾಹನ ಸವಾರರುಗಳಿಗೆ ರಸ್ತೆ ಸುರಕ್ಷತೆ ಜಾಗೃತಿ ಮತ್ತು ತಿಳುವಳಿಕೆ ಮೂಡಿಸುವ (automated smart and road safety awareness sensitization) ಕಾರ್ಯವನ್ನು ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ.

**<u>ಅನುಬಂಧ-2</u>**

**ರಾಜ್ಯದಲ್ಲಿ ಹೆಚ್ಚುತ್ತಿರುವ ರಸ್ತೆ ಅಪಘಾತಗಳನ್ನು ಶೂನ್ಯ ಮಟ್ಟಕ್ಕಿಳಿಸಲು ಮತ್ತು ಸಾರಿಗೆ ಸುರಕ್ಷತಾ ಕ್ರಮಗಳ ಪಾಲನೆಯ ನಿರ್ಲಕ್ಷದ ವಿರುದ್ಧ ಶೂನ್ಯ ಸಹಿಷ್ಣುತೆ (Zero-Tolerance Policy towards to rules violation) ಯನ್ನು ಸಾಧಿಸಲು ಸಾರಿಗೆ ಇಲಾಖೆಯಿಂದ ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿವೆ:**

ಪ್ರತಿ ವರ್ಷ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ವತಿಯಿಂದ ಸಾರ್ವಜನಿಕರಲ್ಲಿ ರಸ್ತೆ ಸುರಕ್ಷತಾ ಅರಿವು ಮೂಡಿಸುವ ಹಾಗೂ ಅಪಘಾತಗಳನ್ನು ಶೂನ್ಯ ಮಟ್ಟಕ್ಕಿಳಿಸುವ ನಿಟ್ಟಿನಲ್ಲಿ ಅತಿವೇಗದ ಚಾಲನೆ ಯಿಂದ ಆಗುವ ಅಪಘಾತಗಳ ದುಷ್ಪರಿಣಾಮಗಳ ಕುರಿತು ಸಮೂಹ ಮಾಧ್ಯಮ (Mass media campaign) ಮೂಲಕ ಜಾಗೃತಿ ಮೂಡಿಸುವ ಅಭಿಯಾನವನ್ನು ಸಾಮಾಜಿಕ ಜಾಲತಾಣಗಳಾದ Twitter, Instagram, Facebook, Youtube, Movie Theater, Radio Jingles, Doordarshan / TV channels, Newspaper, Hoarding / Digital Screens at Strategic Locations ಮೂಲಕ ರಸ್ತೆ ಸುರಕ್ಷತಾ ವಿಷಯದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. 2022-23 ನೇ ಸಾಲಿನಲ್ಲಿ ಬೆಂಗಳೂರು ನಗರದ 40 ಸ್ಥಳ ಪ್ರದೇಶದಲ್ಲಿ ರಸ್ತೆ ಸುರಕ್ಷತಾ ವಿಷಯದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಕೈಗೊಳ್ಳಲಾಗಿರುತ್ತದೆ.

ಚಾಲನ ಅನುಜ್ಞಾಪತ್ರ ನೀಡುವ ಪೂರ್ವದಲ್ಲಿ ಅಭ್ಯರ್ಥಿಗಳನ್ನು ಪರೀಕ್ಷೆಗೆ ಒಳಪಡಿಸುವ ನಿಟ್ಟಿನಲ್ಲಿ 50 LMV Driving simulators ಗಳನ್ನು 2022-23, 2023-24 ನೇ ಸಾಲಿನಲ್ಲಿ ಪ್ರಾದೇಶಿಕ / ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಅಳವಡಿಸಲಾಗಿದೆ ಹಾಗೂ 32 ಸಹಾಯಕ / ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ರಸ್ತೆ ಸುರಕ್ಷತಾ ಜಾಗೃತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

2022-2023, 2023-24 ನೇ ಸಾಲಿನಲ್ಲಿ ಮದ್ಯಪಾನ ಸೇವನೆ ಮಾಡಿ ವಾಹನ ಚಲಾಯಿಸುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ 347 ಬ್ರೆತ್ ಅನಲೈಸರ್‌ಗಳನ್ನು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದಿಂದ ಖರೀದಿಸಿ ರಾಜ್ಯದ ಎಲ್ಲಾ ಸಹಾಯಕ / ಪ್ರಾದೇಶಿಕ ಸಾರಿಗೆ ಕಛೇರಿಗಳಿಗೆ, KSRTC, KKRTC, NWRTC, BMTC ಹಸ್ತಾಂತರಿಸಲಾಗಿದೆ.

ಹೆಲ್ಮೆಟ್ ಧರಿಸುವ ಪ್ರಾಮುಖ್ಯತೆಯನ್ನು ಹಾಗೂ ಅತಿವೇಗದ ಚಾಲನೆಯಿಂದಾಗುವ ದುಷ್ಪರಿಣಾಮಗಳ ಕುರಿತು ಹಾಗೂ ರಸ್ತೆ ಸುರಕ್ಷತೆಯ ಕುರಿತು ಸಾರ್ವಜನಿಕರಿಗೆ ಅರಿವು ಉಂಟು ಮಾಡುವ ನಿಟ್ಟಿನಲ್ಲಿ ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ / ಸಪ್ತಾಹವನ್ನು ಪ್ರತಿ ವರ್ಷ ಜನವರಿ ಮಾಹೆಯಲ್ಲಿ ರಸ್ತೆ ಸುರಕ್ಷತಾ ಅಭಿಯಾನವನ್ನು ಕೈಗೊಳ್ಳಲಾಗಿರುತ್ತದೆ.

ಚಾಲಕರ ಚಾಲನಾ ಸಾಮರ್ಥ್ಯವನ್ನು ವೈಜ್ಞಾನಿಕವಾಗಿ ಪರೀಕ್ಷಿಸುವ ನಿಟ್ಟಿನಲ್ಲಿ ಎಲ್ಲಾ ಕಛೇರಿಗಳ ವ್ಯಾಪ್ತಿಯಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಪ್ರಸ್ತುತ 08 ಸ್ವಯಂಚಾಲಿತ ಚಾಲನಾ ಪರೀಕ್ಷಾಪಥಗಳು ಕಾರ್ಯನಿರ್ವಹಿಸುತ್ತಿವೆ. ಉಳಿದಂತೆ 37 ಪಥಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿವೆ.

ವಾಹನಗಳ ಸುಸ್ಥಿತಿಯನ್ನು ವೈಜ್ಞಾನಿಕವಾಗಿ ಆಧುನಿಕ ಯಂತ್ರೋಪಕರಣ ಮೂಲಕ ಪರೀಕ್ಷಿಸುವ ಸಂಬಂಧ ಜಿಲ್ಲೆಗೊಂದರಂತೆ ರಾಜ್ಯಾದ್ಯಾಂತ 32 ಸ್ವಯಂಚಾಲಿತ ಪರೀಕ್ಷಾ ಕೇಂದ್ರಗಳನ್ನು (ATS) ಸ್ಥಾಪಿಸಲು ಉದ್ದೇಶಿಸಿದ್ದು, ಈ ಸಂಬಂಧ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. ಪ್ರಸ್ತುತ ರಾಜ್ಯದಲ್ಲಿ 03 ಪರೀಕ್ಷಾ ಕೇಂದ್ರಗಳು ಕಾರ್ಯಾಚರಿಸುತ್ತಿವೆ.

ಚಾಲಕರಿಗೆ ಉತ್ತಮ ತರಬೇತಿಯನ್ನು ನೀಡಿ, ಚಾಲನಾ ಕೌಶಲ್ಯವನ್ನು ಅಭಿವೃದ್ಧಿಪಡಿಸಿ ಸಮಾಜಕ್ಕೆ ಗುಣಮಟ್ಟದ ಚಾಲಕರನ್ನು ನೀಡುವ ದೃಷ್ಠಿಯಿಂದ ರಾಜ್ಯದಲ್ಲಿ ಸರ್ಕಾರದ ವತಿಯಿಂದ ಭಾರಿ ವಾಹನ ಚಾಲಕರ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ಪ್ರಸ್ತುತ ರಾಜ್ಯದಲ್ಲಿ 04 ಇಂತಹ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ ಮತ್ತು 03 ಕೇಂದ್ರಗಳು ನಿರ್ಮಾಣ ಹಂತದಲ್ಲಿವೆ.

ಕೇಂದ್ರ ಸರ್ಕಾರದ ರಸ್ತೆ ಮತ್ತು ಹೆದ್ದಾರಿಗಳ ಸಚಿವಾಲಯದ ನಿರ್ದೇಶನದಂತೆ ಮೋಟಾರು ವಾಹನ ಕಾಯ್ದೆ 1988ರ ಕಲಂ 136A ಮತ್ತು ಕೇಂದ್ರ ಮೋಟಾರು ವಾಹನ ನಿಯಮಗಳು 1989ರ ನಿಯಮ 167Aನ್ನು ಜಾರಿಗೊಳಿಸುವ ದಿಸೆಯಲ್ಲಿ, Electronic Monitoring and Enforcement of Road Safety ರಡಿ Black Spot ಇರುವ ರಾಷ್ಟ್ರೀಯ / ರಾಜ್ಯ ಹೆದ್ದಾರಿಗಳಲ್ಲಿ ಮತ್ತು ಹೆಚ್ಚಿನ ಸಂಚಾರ

ಸಾಂದ್ರತೆಯ ಜಂಕ್ಷನ್‌ಗಳಲ್ಲಿ (ಒಟ್ಟು 80 ಸ್ಥಳಗಳಲ್ಲಿ) AI ಆಧಾರಿತ ಕ್ಯಾಮರಾಗಳನ್ನು ಅಳವಡಿಸಲಾಗುತ್ತಿದೆ.

ಸಾರಿಗೆ ಇಲಾಖೆಯು ಈಗಾಗಲೇ ರಾಜ್ಯದ 07 ಟೋಲ್ ಪ್ಲಾಜಾಗಳಲ್ಲಿ AI ಆಧಾರಿತ ಕ್ಯಾಮಾರಾಗಳನ್ನು SMART ENFORCEMENT ಯೋಜನೆಯಡಿ ಅಳವಡಿಸಿ ವಾಹನ ಸವಾರರುಗಳಿಗೆ ರಸ್ತೆ ಸುರಕ್ಷತೆ ಜಾಗೃತಿ ಮತ್ತು ತಿಳುವಳಿಕೆ ಮೂಡಿಸುವ (automated smart and road safety awareness sensitization) ಕಾರ್ಯವನ್ನು ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ.

ಇದಲ್ಲದೆ, ಪ್ರವರ್ತನ ಸಮಯದಲ್ಲಿ ವಾಹನ ಚಾಲಕರುಗಳು ಅಜಾಗರುಕತೆಯಿಂದ, ಸುಸ್ಥಿತಿಯಲ್ಲಿಲ್ಲದ ವಾಹನಗಳನ್ನು ಮತ್ತು ಕೇಂದ್ರ ಮೋಟಾರು ವಾಹನ ಕಾಯ್ದೆ / ನಿಯಮಗಳನ್ನು ಉಲ್ಲಂಘಿಸುತ್ತಿರುವವರ ವಿರುದ್ಧ ನಿಯಮಾನುಸಾರ ದಂಡಗಳನ್ನು ವಿಧಿಸುವ ಮೂಲಕ ಕಾನೂನು ಕ್ರಮವನ್ನು ಕೈಗೊಳ್ಳಲಾಗುತ್ತಿದೆ. ಕಳೆದ 5 ವರ್ಷಗಳಲ್ಲಿ ವಿಧಿಸಿರುವ ದಂಡದ ವಿವರಗಳು ಈ ಕೆಳಕಂಡಂತಿವೆ.

| ಕ್ರ ಸಂ | ವರ್ಷ | ತಪಾಸಣೆಗೊಂಡ ವಾಹನಗಳು | ದಾಖಲಿಸಿದ ಪ್ರಕರಣಗಳು | ವಶಪಡಿಸಿಕೊಂಡ ವಾಹನಗಳು | ದಂಡ |
|---|---|---|---|---|---|
| 1 | 2021-22 | 17,96,903 | 2,81,917 | 4068 | 118,42,72,934 |
| 2 | 2022-23 | 29,96,659 | 3,47,619 | 3655 | 149,02,20,058 |
| 3 | 2023-24 | 22,74,232 | 3,71,015 | 5456 | 171,23,40,220 |
| 4 | 2024-25 | 21,33,610 | 4,01,595 | 5523 | 197,50,02,608 |
| 5 | 01-04-2025 ಯಿಂದ 31-10-2025 ರ ವರೆಗೆ | 11,19,445 | 2,17,209 | 3215 | 126,73,70,613 |

## ಅನುಬಂಧ-3

**ಕ.ರಾ.ರ.ಸಾ.ನಿಗಮದಲ್ಲಿ ಅಪಘಾತಗಳನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಕೆಳಕಂಡ ಕ್ರಮಗಳನ್ನು ಅನುಸರಿಸಲಾಗುತ್ತಿದೆ.**

1. ಚಾಲಕರನ್ನು ನೇಮಕ ಮಾಡಿಕೊಳ್ಳುವ ಕನಿಷ್ಠ ವಯೋಮಿತಿಯನ್ನು 21 ರಿಂದ 24 ವರ್ಷಕ್ಕೆ ಏರಿಸಲಾಗಿದೆ.
2. ಉತ್ತಮ ಚಾಲನೆಯಿಲ್ಲದ ಚಾಲಕರನ್ನು ಹಾಗೂ ಅಪಘಾತ ಮಾಡಿರುವ ಚಾಲಕರನ್ನು ಗುರುತಿಸಿ ಹೆಚ್ಚಿನ ತರಬೇತಿಗಾಗಿ ಚಾಲಕರನ್ನು ತರಬೇತಿ ಕೇಂದ್ರಕ್ಕೆ ನಿಯೋಜಿಸಲಾಗುತ್ತಿದೆ.
3. ಎಲ್ಲಾ ಸಾರಿಗೆ ನಿಗಮಗಳ ಸಮೂಹದ ಸಹಭಾಗಿತ್ವದೊಂದಿಗೆ ಮದ್ಯಪಾನ ಸೇವನೆ ಅಭ್ಯಾಸವಿರುವ ಚಾಲಕರನ್ನು ಗುರುತಿಸಿ ಮದ್ಯಪಾನ ವಿಮುಕ್ತಿ ಕೇಂದ್ರದಲ್ಲಿರುವ ಕಾರ್ಯಕ್ರಮಕ್ಕೆ ಒಳಪಡಿಸಿ, ಮದ್ಯಪಾನ ಸೇವನೆ ಚಟ ತಪ್ಪಿಸಲು ಪ್ರಯತ್ನಿಸಲಾಗುತ್ತಿದೆ.
4. ಎರಡು ವರ್ಷಗಳಿಗೊಮ್ಮೆ 40 ವರ್ಷಕ್ಕಿಂತ ಹೆಚ್ಚಿನ ವಯಸ್ಸಾದ ಚಾಲಕರಿಗೆ ಕಡ್ಡಾಯವಾಗಿ ಕಣ್ಣಿನ ತಪಾಸಣೆಯನ್ನು ಮಾಡಲಾಗುತ್ತಿದೆ.
5. ತಡ ರಾತ್ರಿ ಮತ್ತು ಬೆಳಗಿನ ಜಾವದಲ್ಲಿ ಅಗ್ಗಿಂದಾಗ್ಗೆ ಚಾಲಕರುಗಳು ಮದ್ಯಪಾನ ಮಾಡದೆ ಇರುವ ಬಗ್ಗೆ ಉಸಿರು ತಪಾಸಣೆಗೆ ಒಳಪಡಿಸಲಾಗುವುದು. ಇದರಿಂದಾಗಿ ಚಾಲಕರುಗಳಲ್ಲಿ ಮದ್ಯಪಾನದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.
6. ಎಲ್ಲಾ ವಾಹನಗಳಿಗೆ ವೇಗ ಮಿತಿ ಉಪಕರಣ ಅಳವಡಿಸಲಾಗಿದೆ
7. ಹೊಸದಾಗಿ ನೇಮಕಗೊಂಡ ಚಾಲಕರನ್ನು ಅನುಸೂಚಿ ಸೇವೆಗೆ ಕಳುಹಿಸುವುದಕ್ಕಿಂತ ಮುಂಚೆ ಸುರಕ್ಷತಾ ಚಾಲನಾ ಸಂಬಂಧಿತ ಅವಶ್ಯಕ ವಿಷಯಗಳ ಬಗ್ಗೆ ತರಬೇತಿ ನೀಡಲಾಗುತ್ತಿದೆ.
8. ವಿಭಾಗದ ವ್ಯಾಪ್ತಿಗೆ ಬರುವ ಹೆಚ್ಚಿನ ಅಪಘಾತಗಳು ಘಟಿಸುವ ವಲಯಗಳನ್ನು ಗುರುತಿಸಿ, ಆ ಸ್ಥಳಗಳಲ್ಲಿ ಸೂಚನಾ ಫಲಕಗಳನ್ನು ಹಾಕಿಸುವುದಲ್ಲದೆ, ಘಟಕಗಳಲ್ಲೂ ಸಹ ಪ್ರದರ್ಶಿಸಿ ಎಲ್ಲಾ ಚಾಲಕರ ಗಮನಕ್ಕೆ ತಂದು ತಿಳುವಳಿಕೆ ನೀಡಲಾಗುತ್ತಿದೆ.
9. ವಾಹನ ಚಾಲಕರುಗಳಿಗೆ ಮುನ್ನೆಚ್ಚರಿಕೆ ಕುರಿತು ಅರಿವು ಮೂಡಿಸುವ ಸಲುವಾಗಿ ಪ್ರತಿ ವರ್ಷವೂ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಮತ್ತು ಮಾಸಾಚರಣೆಯನ್ನು ಆಚರಿಸಲಾಗುತ್ತಿದೆ. ಕಾರ್ಯಕ್ರಮದಲ್ಲಿ ಅಪಘಾತದಿಂದ ಉಂಟಾಗುವ ಸಾವು-ನೋವುಗಳ ಬಗ್ಗೆ ಅರಿವು ಮೂಡಿಸಲು ಕಾರ್ಯಾಗಾರವನ್ನು ಆಯೋಜಿಸಲಾಗುತ್ತಿದೆ.
10. ಚಾಲನಾ ಸಿಬ್ಬಂದಿಗಳಿಗೆ ಪುನಶ್ಚೇತನ ಶಿಬಿರಗಳನ್ನು ಏರ್ಪಡಿಸಿ ಸುರಕ್ಷತಾ ಕ್ರಮಗಳನ್ನು ಅನುಸರಿಸುವ ಬಗ್ಗೆ ತಿಳುವಳಿಕೆ ನೀಡಲಾಗುತ್ತಿದೆ.
11. ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಬಸ್ ನಿಲ್ದಾಣಗಳ ಹೊರ ಹೋಗುವ ಮತ್ತು ಒಳಬರುವ ದ್ವಾರಗಳಲ್ಲಿ ರಸ್ತೆ ಉಬ್ಬುಗಳನ್ನು ಹಾಕಿಸಲು ಕ್ರಮಕೈಗೊಳ್ಳಲಾಗುತ್ತಿದೆ.
12. ಸಂಚಾರ ನಿಯಮಗಳನ್ನು ತಪ್ಪದೇ ಪಾಲಿಸುವಂತೆ ನಿಗಮದ ತರಬೇತಿ ಕೇಂದ್ರಗಳಲ್ಲಿ ರಸ್ತೆ ಸುರಕ್ಷತೆ ಬಗ್ಗೆ ಪ್ರಾತ್ಯಕ್ಷಿಕೆಗಳನ್ನು (ವಿಡಿಯೋ ಕ್ಲಿಪ್) ತೋರಿಸಲು ವ್ಯವಸ್ಥೆ ಮಾಡಲಾಗಿದೆ.
13. ರಾತ್ರಿ ಸಾರಿಗೆಗಳಲ್ಲಿ ಕರ್ತವ್ಯ ನಿರ್ವಹಿಸುವ ಚಾಲಕರಿಗೆ ಫ್ಲಾಸ್ಕ್‌ನ್ನು ನೀಡಿದ್ದು, ಕಾಫಿ/ಚಹಾ ಸೇವನೆಯಿಂದ ನಿದ್ರೆ ಮಂಪರು ತಡೆಯಬಹುದಾಗಿದೆ.
14. ಅಪಘಾತ ವಲಯಗಳಲ್ಲಿ ರಾತ್ರಿ ಸಮಯದಲ್ಲಿ ಲೈನ್‌ಚೆಕ್ಕಿಂಗ್ ತಂಡಗಳಿಂದ ವಾಹನಗಳನ್ನು ಪಾರ್ಕಿಂಗ್ ಮಾಡಿಸಿ, ಅವರಿಗೆ ಅಪಘಾತಗಳ ಬಗ್ಗೆ ಹಾಗೂ ಸುರಕ್ಷಿತವಾಗಿ ಚಾಲನೆ ಮಾಡುವ ಬಗ್ಗೆ ತಿಳುವಳಿಕೆ ನೀಡಲಾಗುತ್ತಿದೆ.
15. ದೂರದ ಮಾರ್ಗಗಳ ವಾಹನಗಳಲ್ಲಿ, ಪ್ರಮುಖವಾಗಿ ಪ್ರತಿಷ್ಠಿತ ಸಾರಿಗೆಗಳಲ್ಲಿ ಸುಸ್ಥಿತಿಯಲ್ಲಿರುವ ಅಗ್ನಿ ಶಮನ ನಿರೋಧಕ ಉಪಕರಣವು (Fire Extinguisher) ಇರುವಂತೆ ಖಾತರಿಪಡಿಸಿಕೊಳ್ಳುವುದು ಹಾಗೂ ಇದನ್ನು ಉಪಯೋಗಿಸುವ ಬಗ್ಗೆ ಚಾಲನಾ ಸಿಬ್ಬಂದಿಗೆ ತಿಳುವಳಿಕೆ ನೀಡಲಾಗಿದೆ.
16. ವಾಹನದ ತುರ್ತು ನಿರ್ಗಮನದ ಬಾಗಿಲು (Emergency Exit) ಎಲ್ಲಿದೆ ಎಂಬ ಬಗ್ಗೆ ಪ್ರಯಾಣಿಕರಿಗೆ ಸೂಕ್ತ ತಿಳುವಳಿಕೆಯನ್ನು ಸ್ಥಳೀಯ ಬಾಷೆಯಲ್ಲಿ ಹಾಗೂ ಅಂತರರಾಜ್ಯದಲ್ಲಿ ಕಾರ್ಯಾಚರಣೆಯಾಗುವ ಮಾರ್ಗಗಳಲ್ಲಿ ಆಂಗ್ಲ ಬಾಷೆಯಲ್ಲಿ ಸಹ ತಿಳಿಸುವಂತೆ ಎಲ್ಲಾ ನಿರ್ವಾಹಕರಿಗೆ ಸೂಚನೆ ನೀಡಲಾಗಿದೆ.
17. ಎಲ್ಲಾ ಬಸ್ ನಿಲ್ದಾಣಗಳಲ್ಲಿ ಸಾರ್ವಜನಿಕರ ಗಮನಕ್ಕೆ ಬರುವಂತೆ ಬ್ಯಾನರ್‌ಗಳ ಮೂಲಕ ಸ್ಫೋಟಕ ಮತ್ತು ಪ್ರತಿಬಂಧಕ ವಸ್ತುಗಳನ್ನು ಸಾಗಿಸಲಾಗುವುದಿಲ್ಲ ಎಂಬ ಬಗ್ಗೆ ಹಾಗೂ ತುರ್ತು ಸಂದರ್ಭದಲ್ಲಿ ತುರ್ತು ನಿರ್ಗಮನ ದ್ವಾರವನ್ನು (Emergency Exit) ಉಪಯೋಗಿಸುವಂತೆ ಸದರಿ ಬ್ಯಾನರ್‌ನಲ್ಲಿ ಬರೆಸಲಾಗಿದೆ.

18. ಬಸ್ ನಿಲ್ದಾಣಗಳಲ್ಲಿ ಧ್ವನಿವರ್ಧಕ ಮುಖಾಂತರ ಸಾರ್ವಜನಿಕ ಗಮನಕ್ಕೆ ಬರುವಂತೆ ತುರ್ತ ಸಂದರ್ಭದಲ್ಲಿ ಬಸ್ಸಿನಲ್ಲಿರುವ ತುರ್ತು ನಿರ್ಗಮನ ದ್ವಾರವನ್ನು ಬಳಕೆ ಮಾಡಲು ತಿಳಿಸಲಾಗಿದೆ.
19. ಎಲ್ಲಾ ವಾಹನಗಳ ತುರ್ತು ನಿರ್ಗಮನದ ದ್ವಾರದ ಚಿಲಕ ಇತ್ಯಾದಿಗಳು ಸರಿಯಾಗಿದೆಯೇ ಹಾಗೂ ಸುಲಭವಾಗಿ ತೆಗೆಯಬಹುದೇ ಎಂಬುದರ ಬಗ್ಗೆ ಪರಿಶೀಲಿಸಲಾಗುತ್ತಿದೆ.
20. ಪ್ರತಿ ವಾಹನ ಘಟಕಕ್ಕೆ ಬಂದಾಗ Defect Slip ನ್ನು ಪರಿಶೀಲಿಸಿ ಪ್ರಮುಖವಾಗಿ ಇಂಧನ ಸೋರುವಿಕೆ, ಬ್ಯಾಟರಿ ಕನೆಕ್ಷನ್, ಕೇಬಲ್ ಕನೆಕ್ಷನ್ ಇತ್ಯಾದಿ ಎಲ್ಲಾ ಎಲೆಕ್ಟ್ರಿಕಲ್ ಸಿಸ್ಟಮ್ ಸುಸ್ಥಿತಿಯಲ್ಲಿದೆ ಎಂಬ ಬಗ್ಗೆ ಖಾತರಿಪಡಿಸಿಕೊಳ್ಳಲಾಗುತ್ತಿದೆ.
21. ದೂರದ ಮಾರ್ಗಗಳ ವಾಹನಗಳಲ್ಲಿ, ಪ್ರಮುಖವಾಗಿ ಪ್ರತಿಷ್ಠಿತ ಸಾರಿಗೆಗಳಲ್ಲಿ ಸುಸ್ಥಿತಿಯಲ್ಲಿರುವ ಅಗ್ನಿ ಶಮನ ನಿರೋಧಕ ಉಪಕರಣವು (Fire Extinguisher) ಇರುವಂತೆ ಖಾತರಿಪಡಿಸಿಕೊಳ್ಳುವುದು ಹಾಗೂ ಇದನ್ನು ಉಪಯೋಗಿಸುವ ಬಗ್ಗೆ ಚಾಲನಾ ಸಿಬ್ಬಂದಿಗೆ ತಿಳುವಳಿಕೆ ನೀಡಲಾಗಿದೆ.
22. ನಿಗಮದ ವಾಹನಗಳಿಗೆ ಕಿಡಿಗೇಡಿಗಳು (Miscreants) ಹಾನಿ/ವಿಧ್ವಂಸಕ ಕೃತ್ಯ ಮಾಡುವ ಸಂಭವ ಇರುವುದರಿಂದ ಕರ್ತವ್ಯ ನಿರತ ಚಾಲನಾ ಸಿಬ್ಬಂದಿಗಳು ಮಾರ್ಗದಲ್ಲಿ ಕಾರ್ಯಾಚರಣೆಯಲ್ಲಿರುವಾಗ ವಾಹನಗಳ ಸುರಕ್ಷತೆ ಬಗ್ಗೆ, ಬಸ್ಸಿನಲ್ಲಿ ಪ್ರಯಾಣಿಸುತ್ತಿರುವ ಪ್ರಯಾಣಿಕರ ಸುರಕ್ಷತೆ ಬಗ್ಗೆ ಹಾಗೂ ಪ್ರಯಾಣಿಕರು ತಮ್ಮ ಜೊತೆಯಲ್ಲಿ ತೆಗೆದುಕೊಂಡು ಹೋಗುವ ಲಗ್ಗೇಜ್‌ನ ಬಗ್ಗೆಯು ಸಹ ಹೆಚ್ಚಿನ ನಿಗಾ/ಎಚ್ಚರ ವಹಿಸುವಂತೆ ತಿಳುವಳಿಕೆ ನೀಡಲಾಗಿದೆ.
23. ವಿಭಾಗ ಮಟ್ಟದ ಅಧಿಕಾರಿಗಳು ಘಟಕಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಚಾಲನಾ ಸಿಬ್ಬಂದಿಗಳನ್ನು ಉದ್ದೇಶಿಸಿ ಅಪಘಾತಗಳ ಬಗ್ಗೆ ಹಾಗೂ ಬಸ್ಸಿನಲ್ಲಿರುವ ತುರ್ತು ನಿರ್ಗಮನ ದ್ವಾರದ ಬಳಕೆ ಮಾಡಿಕೊಳ್ಳುವ ಬಗ್ಗೆ ಮತ್ತು ಸುರಕ್ಷತಾ ಚಾಲನೆ ಬಗ್ಗೆ ತಿಳುವಳಿಕೆ ನೀಡಲಾಗಿದೆ.

**ವಾ.ಕ.ರ.ಸಾ.ಸಂಸ್ಥೆಯಲ್ಲಿ ಅಪಘಾತಗಳನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಕೆಳಕಂಡ ಕ್ರಮಗಳನ್ನು ಅನುಸರಿಸಲಾಗುತ್ತಿದೆ.**

1. ಚಾಲನಾ ಸಮಯದಲ್ಲಿ ಮೊಬೈಲ್ ಬಳಕೆ, ಕರ್ತವ್ಯದ ಅವಧಿಯಲ್ಲಿ ಮದ್ಯಪಾನ/ಅಮಲಿನ ಪದಾರ್ಥ ಸೇವನೆ ಇತ್ಯಾದಿ ಸಂಚಾರ/ಸುರಕ್ಷತಾ ನಿಯಮಗಳನ್ನು ಉಲ್ಲಂಘಿಸುವ ಚಾಲಕರನ್ನು ಕೂಡಲೇ ವಿಚಾರಣಾ ಪೂರ್ವ ಅಮಾನತ್ತಿನಲ್ಲಿಟ್ಟು ಸೂಕ್ತ ಶಿಸ್ತಿನ ಕ್ರಮ ಕೈಗೊಳ್ಳಲಾಗುತ್ತಿದೆ.
2. ಸಂಸ್ಥೆಗೆ ಚಾಲಕರನ್ನು ನೇಮಕಾತಿ ಮಾಡುವ ಸಂದರ್ಭದಲ್ಲಿಯೇ "ಗಣಕೀಕೃತ ಚಾಲನಾ ವೃತ್ತಿ ಪರೀಕ್ಷೆ" ಮಾಡುವ ಮೂಲಕ ಅರ್ಹ ಚಾಲಕರನ್ನು ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ.
3. ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಗಳಿಂದ ಸ್ಪೀಡ್ ಗವರ್ನರ್‌ಗಳನ್ನು ಪಡೆದು ಅಳವಡಿಸುವ ಕ್ರಮ ಜಾರಿಯಲ್ಲಿರುತ್ತದೆ.
4. ಸಂಸ್ಥೆಯ ತರಬೇತಿ ಕೇಂದ್ರದಲ್ಲಿ ಚಾಲನಾ ಸಿಬ್ಬಂದಿ ಹಾಗೂ ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗೆ ನಿಯಮಿತವಾಗಿ ತರಬೇತಿಯನ್ನು ನೀಡಲಾಗುತ್ತಿದೆ. ಹಾಗೂ ಅಪಘಾತ ಪ್ರವೃತ್ತಿ ಹೊಂದಿದ ಚಾಲಕರುಗಳನ್ನು ಗುರುತಿಸಿ ಅವರುಗಳಿಗೆ ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ಸಹ ಹಮ್ಮಿಕೊಳ್ಳಲಾಗುತ್ತಿದೆ.
5. ಘಟಕಗಳಲ್ಲಿ ನಿರಂತರವಾಗಿ ಚಾಲಕರುಗಳನ್ನು ಕರ್ತವ್ಯಕ್ಕೆ ನಿಯೋಜಿಸುವಾಗ ರಸ್ತೆ ಸುರಕ್ಷತೆ ಬಗ್ಗೆ ತಿಳುವಳಿಕೆ ನೀಡಲಾಗುತ್ತಿದೆ.
6. ಅಪಘಾತ/ಅವಘಡಗಳನ್ನು ತಡೆಯುವ ನಿಟ್ಟಿನಲ್ಲಿ ಅಗತ್ಯ ರಸ್ತೆ ಸುರಕ್ಷತೆ ಕ್ರಮಗಳನ್ನು ಎಲ್ಲ ಪ್ರಮುಖ ಬಸ್ ನಿಲ್ದಾಣಗಳಲ್ಲಿ ಧ್ವನಿವರ್ಧಕಗಳ ಮೂಲಕ ಉದ್ಘೋಷಿಸಲಾಗುತ್ತಿದೆ.
7. ಸಂಸ್ಥೆಯ ಅಧಿಕಾರಿಗಳು ಹಾಗೂ ಸಂಚಾರ ಪೋಲೀಸ್ ಇಲಾಖೆಯ ಸಹಯೋಗದೊಂದಿಗೆ ತರಬೇತಿ ಕಾರ್ಯಾಗಾರಗಳನ್ನು ಆಯೋಜಿಸಲಾಗುತ್ತಿದೆ.
8. ದೂರದ ಹಾಗೂ ರಾತ್ರಿ ಸಾರಿಗೆಗಳಿಗೆ ಅನುಭವಿ ಚಾಲಕರನ್ನು ನಿಯೋಜಿಸಲಾಗುತ್ತಿದೆ.
9. ಪ್ರತೀ ವರ್ಷ ರಸ್ತೆ ಸುರಕ್ಷತಾ ಸಪ್ತಾಹವನ್ನು ಆಯೋಜಿಸಿ ಚಾಲನಾ ಸಿಬ್ಬಂದಿಗಳಿಗೆ ಅಪಘಾತಗಳ ದುಷ್ಪರಿಣಾಮಗಳ ಬಗ್ಗೆ, ಸಂಸ್ಥೆಯ ಆರ್ಥಿಕ ಸ್ಥಿತಿ-ಗತಿ ಮೇಲೆ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ, ಸುರಕ್ಷತೆ ಬಗ್ಗೆ ಹಾಗೂ ಸುರಕ್ಷತಾ ಕ್ರಮಗಳ ಬಗ್ಗೆ ಹೆಚ್ಚಿನ ಅರಿವು ಮೂಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
10. ಪ್ರತಿ ತಿಂಗಳು ಘಟಕಗಳಲ್ಲಿ ರಸ್ತೆ ಸುರಕ್ಷತಾ ದಿನವನ್ನು ಆಚರಿಸಲಾಗುತ್ತಿದೆ.
11. ವಿಭಾಗಗಳ ವ್ಯಾಪ್ತಿಯಲ್ಲಿನ ಸಾರಿಗೆ ಇಲಾಖೆ/ಪೋಲೀಸ್ ಇಲಾಖೆ ಗುರುತಿಸಿದ ಹಾಗೂ ಸಂಸ್ಥೆಯಿಂದ ಪಟ್ಟಿ ಮಾಡಿದ ಅಪಘಾತದ ಕಪ್ಪು ಸ್ಥಳ(Black Spot)ಗಳ ಬಗ್ಗೆ ಚಾಲನಾ ಸಿಬ್ಬಂದಿಗಳಲ್ಲಿ ಜಾಗೃತಿ ಮೂಡಿಸಲು ಘಟಕಗಳಲ್ಲಿ ಪ್ರದರ್ಶಿಸಲಾಗುತ್ತಿದೆ.

12. ಪ್ರತಿ ಮಾಹೆಯಲ್ಲಿ ಘಟಕ ವ್ಯಾಪ್ತಿಯಲ್ಲಿನ ಕನಿಷ್ಠ ಒಂದು ಶಾಲೆ/ಕಾಲೇಜಿಗೆ ಭೇಟಿ ನೀಡಿ ವಿಧ್ಯಾರ್ಥಿಗಳಿಗೆ ರಸ್ತೆ ಸುರಕ್ಷತೆ ಕುರಿತು ಸಂಚಾರ ನಿಯಮಗಳ ಬಗ್ಗೆ, ಹಾಗೂ ಬಸ್ ನಿಲ್ದಾಣಗಳಲ್ಲಿ ಬಸ್ ಹತ್ತುವಾಗ ಮತ್ತು ಬಸ್ ಇಳಿಯುವಾಗ ಜಾಗ್ರತೆ ವಹಿಸುವಂತೆ ತಿಳುವಳಿಕೆ ಹೇಳಲಾಗುತ್ತಿದೆ. ಸದರಿ ಕಾರ್ಯಕ್ರಮವನ್ನು ಸುರಕ್ಷತೆಗೆ ಸಂಬಂಧಿಸಿದಂತೆ ವಿಡಿಯೋ ತುಣುಕುಗಳ ಪ್ರದರ್ಶಿಸುವುದರೊಂದಿಗೆ ಸಾರಿಗೆ ಇಲಾಖೆ ಅಧಿಕಾರಿ ಹಾಗೂ ಸಂಚಾರ ಪೋಲಿಸ್ ಅಧಿಕಾರಿಗಳ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ.
13. ಘಟಕಗಳಲ್ಲಿ ಚಾಲನಾ ಸಿಬ್ಬಂದಿಗಳಿಗೆ ವಿವಿಧ ಆಸ್ಪತ್ರೆಗಳ ಸಹಭಾಗಿತ್ವದೊಂದಿಗೆ ಕಣ್ಣಿನ ಪರೀಕ್ಷೆಯ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ.
14. ಸಂಸ್ಥೆಯ ಖಾಸಗಿ ಆಸ್ಪತ್ರೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ಕಾಲಕಾಲಕ್ಕೆ ಚಾಲನಾ ಸಿಬ್ಬಂದಿಗಳ ಆರೋಗ್ಯ ತಪಾಸಣೆಗೆ ಅವಕಾಶ ಕಲ್ಪಿಸಲಾಗಿದೆ.
15. ಅಪಘಾತ ರಹಿತ ಚಾಲಕರಿಗೆ ಬೆಳ್ಳಿ ಹಾಗೂ ಚಿನ್ನದ ಪದಕಗಳನ್ನು ನೀಡಿ ಪ್ರೋತ್ಸಾಹಿಸಲಾಗುತ್ತಿದೆ.
16. ವಾಹನಗಳನ್ನು ಕಾಲಕಾಲಕ್ಕೆ ನಿರಂತರವಾಗಿ ನಿರ್ವಹಣೆಗೆ ಒಳಪಡಿಸಿ ಮಾರ್ಗಗಳ ಮೇಲೆ ನಿಯೋಜಿಸಲಾಗುತ್ತಿದೆ.
17. ಉತ್ತಮ ಚಾಲನಾ ಅಭ್ಯಾಸ ಮತ್ತು ಚಾಲನಾ ಕೌಶಲ್ಯಗಳನ್ನು ಅಳವಡಿಸುವ ಕುರಿತು ಅರಿವು ಮೂಡಿಸುವ ಸಲುವಾಗಿ ಘಟಕ ಮಟ್ಟದಲ್ಲಿ ಚಾಲಕರಿಗೆ ಪಿಸಿಆರ್ಎ ರವರಿಂದ ತರಬೇತಿ ನೀಡಲಾಗುತ್ತಿದೆ.
18. ಅಪಘಾತದಲ್ಲಿ ಭಾಗಿಯಾದ ಚಾಲಕರಿಗೆ ಸುರಕ್ಷಿತ ಚಾಲನಾ ಪುನಶ್ಚೇತನ ತರಬೇತಿಯ ನಂತರ ಮಾರ್ಗದ ಮೇಲೆ ನಿಯೋಜಿಸಲಾಗುತ್ತಿದೆ.
19. ಪತಿ ವಾಹನ ಘಟಕಕ್ಕೆ ಬಂದಾಗ: Defect slip ನಲ್ಲಿ ನಮೂದಿಸಿದ ಹಾಗೂ ದೈನಂದಿನ ಪರಿಶೀಲನೆಯಲ್ಲಿ ಕಂಡುಬಂದ ದೋಷಗಳು ಮುಖ್ಯವಾಗಿ ಬ್ರೇಕ್, ಸ್ಟೇರಿಂಗ್, ಇಂಧನ ಸೋರುವಿಕೆ, ಬ್ಯಾಟರಿ ಕನೆಕ್ಷನ್, ಕೇಬಲ್ ಕನೆಕ್ಷನ್ ಮತ್ತು ಇತರೇ ದೋಷಗಳನ್ನು ಪರಿಶೀಲಿಸಿ ರಿಪೇರಿಗೆ ಕ್ರಮವಹಿಸಿ ಸುಸ್ಥಿತಿಯಲ್ಲಿಡಲಾಗುತ್ತಿದೆ.
20. ಸಂಸ್ಥೆಯ ಎಲ್ಲ ವಾಹನಗಳ Mood Light ಗಳನ್ನು ಹಾಗೂ ನಿರ್ವಾಹಕರ ಆಸನದ ಮೇಲಿನ ಲೈಟ್‌ನ್ನು ಕಡ್ಡಾಯವಾಗಿ ಸುಸ್ಥಿತಿಯಲ್ಲಿಡಲಾಗುತ್ತಿದೆ.
21. ವಾಹನದ ಬ್ರೇಕ್, ಹೆಡ್ ಲೈಟ್, ವೈಪರ್, ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳಲಾಗುತ್ತಿದೆ.
22. ಸಂಸ್ಥೆಯ ವಾಹನಗಳಲ್ಲಿನ ಕ್ಯಾಮರಾಗಳನ್ನು ಕಡ್ಡಾಯವಾಗಿ ಸುಸ್ಥಿತಿಯಲ್ಲಿಡಲಾಗುತ್ತಿದೆ.
23. ಸಂಸ್ಥೆಯ ವಾಹನಗಳ ಎರಡೂ ಬದಿಯಲ್ಲಿನ ಸಣ್ಣ ಕನ್ನಡಿಗಳನ್ನು ಸದಾಕಾಲ ಸರಿ/ಸ್ಥಿರಗೊಳಿಸಲಾಗುತ್ತಿದೆ.
24. ಪೆಟ್ರೋಲ್, ಡೀಸಲ್, ಗ್ಯಾಸ್ ಮತ್ತು ಸೀಮೆಎಣ್ಣೆ ಮುಂತಾದ ನಿಷೇದಿತ/ಸ್ಫೋಟಕ ವಸ್ತುಗಳನ್ನು ಸಂಸ್ಥೆಯ ವಾಹನಗಳಲ್ಲಿ ತೆಗೆದುಕೊಂಡು ಹೋಗುವುದನ್ನು ನಿಷೇಧಿಸಲ್ಪಟ್ಟಿರುತ್ತದೆ. ಅದರಂತೆ, ಸಂಸ್ಥೆಯ ವಾಹನಗಳಲ್ಲಿ ನಿಷೇಧಿಸಲ್ಪಟ್ಟ ವಸ್ತುಗಳನ್ನು ತೆಗೆದುಕೊಂಡು ಹೋಗದಂತೆ ಕ್ರಮ ಕೈಗೊಳ್ಳುವುದು ವಿಭಾಗೀಯ ತನಿಖಾಧಿಕಾರಿಗಳ ತನಿಖಾ ತಂಡದಿಂದ ಆಗಿಂದಾಗ್ಗೆ ಸಂಸ್ಥೆಯ ವಾಹನಗಳನ್ನು ತನಿಖೆಗೊಳಪಡಿಸಿ ಸ್ಫೋಟಕ ವಸ್ತುಗಳನ್ನು ತೆಗೆದುಕೊಂಡು ಹೋಗುವ ಬಗ್ಗೆ ಪರಿಶೀಲಿಸಿ ನಿರ್ಬಂಧಿಸಲಾಗುತ್ತಿದೆ.

**ಕ.ಕ.ರ.ಸಾ.ನಿಗಮದಲ್ಲಿ ಅಪಘಾತಗಳನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಕೆಳಕಂಡ ಕ್ರಮಗಳನ್ನು ಅನುಸರಿಸಲಾಗುತ್ತಿದೆ.**

1. ಘಟಕ ಮಟ್ಟದಲ್ಲಿ ಪ್ರತಿ ದಿನ ಚಾಲಕರಿಗೆ ರಸ್ತೆ ಸುರಕ್ಷತಾ ನಿಯಮಗಳನ್ನು ಪಾಲಿಸಿ ಅಪಘಾತ ರಹಿತ ಸೇವೆ ಸಲ್ಲಿಸಲು ಸೂಕ್ತ ತಿಳುವಳಿಕೆ ನೀಡಿ ಮಾರ್ಗಗಳ ಮೇಲೆ ಕಳುಹಿಸಲಾಗಿರುತ್ತದೆ.
2. ಪ್ರತಿ ತಿಂಗಳ ಕೊನೆಯ ದಿನ ಎಲ್ಲಾ ಘಟಕಗಳಲ್ಲಿ **"ರಸ್ತೆ ಸುರಕ್ಷತಾ ದಿನ"**ವನ್ನಾಗಿ ಆಚರಿಸಿ ಚಾಲನಾ ಸಿಬ್ಬಂದಿಗಳಲ್ಲಿ ಉತ್ತಮ ಚಾಲನಾ ಹವ್ಯಾಸಗಳನ್ನು ರೂಡಿಸಿಕೊಳ್ಳಲು ಮತ್ತು ರಸ್ತೆ ನಿಯಮಗಳ ಪಾಲನೆ ಕುರಿತು ತಿಳುವಳಿಕೆ ಮೂಡಿಸಲಾಗುತ್ತಿದೆ.
3. ಚಾಲಕರುಗಳಿಗೆ ವಿಶೇಷವಾಗಿ ಅಪಘಾತ ಪ್ರವೃತ್ತಿಯುಳ್ಳ ಚಾಲಕರಿಗೆ ಕಾಲ ಕಾಲಕ್ಕೆ ನಿಗಮದ ಪ್ರಾದೇಶಿಕ ತರಬೇತಿ ಕೇಂದ್ರಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.
4. ಅಪಘಾತದಿಂದಾಗುವ ದುಷ್ಪರಿಣಾಮ ಹಾಗೂ ಸುರಕ್ಷತಾ ಕ್ರಮಗಳ ಬಗ್ಗೆ ಜಾಗೃತಿಯನ್ನು ಮೂಡಿಸುವ ಸಲುವಾಗಿ **"ಸಂಚಾರ ಸಭಾ ವಾಹನ"** ವನ್ನು ಎಲ್ಲಾ ಘಟಕಗಳಿಗೆ ನಿಯೋಜಿಸಿ ಜಾಗೃತಿ ಕಾರ್ಯಕ್ರಮ/ತರಬೇತಿ ಹಮ್ಮಿಕೊಳ್ಳಲಾಗುತ್ತಿದೆ.

5. ಅಪಘಾತದಲ್ಲಿ ಭಾಗಿಯಾಗುವ ನಿಗಮದ ಚಾಲಕರಿಗೆ ನಿಗಮದಲ್ಲಿ ಚಾಲ್ತಿಯಲ್ಲಿರುವ ನಿಯಮಗಳ ಪ್ರಕಾರ ಶಿಸ್ತು ಕ್ರಮ ಕೈಗೊಳ್ಳಲಾಗುತ್ತಿದೆ.
6. ಪ್ರತಿ ವರ್ಷ 24ನೇ ಜನವರಿ ರಂದು "**ಚಾಲಕರ ದಿನಾಚರಣೆ**"ಯನ್ನು ಆಚರಿಸಿ ಸುರಕ್ಷತಾ ಚಾಲನೆ ಕುರಿತು ಚಾಲಕರಿಗೆ ಪ್ರೋತ್ಸಾಹಿಸಲಾಗುತ್ತಿದೆ.
7. ಅಪಘಾತ ರಹಿತ ಸೇವೆ ಸಲ್ಲಿಸಿದ ಚಾಲಕರಿಗೆ ಮಾನ್ಯ ಮುಖ್ಯಮಂತ್ರಿಗಳ ಚಿನ್ನದ ಪದಕ(15 ವರ್ಷ ಅಪಘಾತ ರಹಿತ ಸೇವೆ ಸಲ್ಲಿಸಿದ) ಹಾಗೂ ಬೆಳ್ಳಿ ಪದಕ(5 ವರ್ಷ ಅಪಘಾತ ರಹಿತ ಸೇವೆ ಸಲ್ಲಿಸಿದ) ಗಳನ್ನು ನೀಡಿ ಪ್ರೋತ್ಸಾಹಿಸಿ ಉಳಿದ ಚಾಲನಾ ಸಿಬ್ಬಂದಿಗಳಲ್ಲಿ ಅಪಘಾತ ರಹಿತ ಸೇವೆಗೆ ಪ್ರೋತ್ಸಾಹಿಸಲಾಗುತ್ತಿದೆ.
8. ಹೊಸ ಬಸ್‌ಗಳಲ್ಲಿ ಕ್ಯಾಮಾರಾಗಳನ್ನು ಅಳವಡಿಸಿದ್ದು, ಇದರಿಂದ ಅಪಘಾತಗಳ ಪ್ರಕರಣಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡಿ ಕ್ರಮ ವಹಿಸಲಾಗುತ್ತಿದೆ